6. ಸ್ಥಿತಿಯಲ್ಲಿ ವೆತ್ಯಾಸ ವಗೈರೆ ಯೇನು ಯಿದ್ದಾಗ್ಯೂ, ಪರಾಜು ಸದರೀ ನಿಬಂಧನೆಗಳಿಗೆ ವ್ಯತಿರಿಕ್ತವಾಗಿದ್ದು. ಸ್ಥಿತಿಯ ಯೋಗ್ಯತೆ ವಿಷಯದಲ್ಲಿ ಪರಾಜಿನಲ್ಲಿ ತೆಗೆಯಲಿಕ್ಕೆಯುಳ್ಳವರು ಮುಂಚಿತವಾಗಿಯೇ ಸ್ಥಿತಿಯನ್ನ ನೋಡಿ ತೃಪ್ತಿಕರವಾಗಿ ತಿಳಿದುಕೊಳ್ಳಬಹುದು

7. ಅವಶ್ಯಕ ವಿದ್ದಲ್ಲಿ ಪರಾಜಿನಲ್ಲಿ ಪಡಕೊಂಡ ಮನುಷ್ಯನು ಲಾಗವಡುಕೊಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಕ್ರಮವಾಪ ಪರಾಜು ಸರ್ಟಿಫಿಕೇಟ್ ಪಡೆಯಬಹುದು.

ಪಿ. ಆರ್. ಕೃಷ್ಣಮೂರ್ತಿ,
ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿವಿಜ್ಞ.

ಪ್ರಸಿದ್ಧ ಪತ್ರಿಕೆ.

ತಾರೀಖು 13ನೇ ಮಾಹೆ ಸೆಪ್ಟೆಂಬರ್ 1889ನೇ ಇಸವಿ.

I. ಲೇಟ್ ಶ್ರೀನಿವಾಸಪುರ ತಾಲ್ಲೂಕು ರಿಜಿಸ್ಟರ್ 104ನೇ ನಂಬರ್ ಕೊಂಡಾಮರಿ ತಲಾವ್ ಕಾಂಗಾರಿ ವೈದ್ದಿಕ್ಯ 1889ನೇ ಇಸವಿ ಮಾಹೆ ಸೆಪ್ಟೆಂಬರ್ 25ನೇ ತಾರೀಖು ವರಿವಿಗೂ ದರಖಾಸ್ತುಗಳು ಕೋಲಾರ ಡಿವಿಜ್ಞ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರ ವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಿಂಗಳ ವೊತ್ತವನ್ನ ಕಾಣಿಸಲ್ಪಟ್ಟಿರುತ್ತೆ. ಇದು ನಿಷ್ಕರ್ಷೆ ಯಾದದ್ದಾಗಿರುವದಿಲ್ಲ ಕಾಂಗಾರಿಯು 1891ನೇ ಇಸವಿ ಮಾರ್ಚಿ ಮಾಹೆ ಅಖೈರೊಳಗಾಗಿ ಪೂರೈಸತಕ್ಕದ್ದು.

II. ಪ್ಲಾನ್ ಮತ್ತು ಅಂದಾಜು ವಗೈರೆ ಯಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರ ಆಫಿಸಿನಲ್ಲಿ ಮಧ್ಯಾನ್ಹ 11 ಘಂಟೆ ಲಾಗಾಯತು ಸಾಯಂಕಾಲ 4 ಘಂಟೆ ವರಿವಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ..

III. ದರಖಾಸ್ತುಗಳು ಅಚ್ಚುಹಾಕಿದ ಫಾರಮಿನಲ್ಲಿ ಬರೆಯಬೇಕು. ಈ ಫಾರಂಗಳು ಯಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರ ಆಫಿಸಿನಲ್ಲಿ ದೊರೆಯುತ್ತೆ. ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಒಂದು ಸ್ಟೇಟ್‌ಮೆಂಟ್ ಲಗತ್ತುಮಾಡಿರಬೇಕು ಅದರಲ್ಲಿ ಕಂಟ್ರಾಕ್ಟುದಾರು ಯಾವ ರೇಟ್ ಪ್ರಕಾರ ಪ್ರತಿ ಐಟಿಂಗಳ ಕೆಲಸವನ್ನು ಮಾಡಿಸ ಬಲ್ಲನೋ ಆರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ಐಟಂ.	ಕ್ಕೆ.	ವೊತ್ತ.	ಕಂಟ್ರಾಕ್ಟುದಾರ ಕೆಲಸಮಾಡುವದಕ್ಕೆ ವಹ್ಪುವ ದರ.
ಮಣ್ಣು ಕೆಲಸ	ಸಲೆಗಜ	16000	
ಹಳೇಕಲ್ಲು ಕೆಲಸ	ಡಿಟೋ	274	
ಹೊಸಕಲ್ಲು ಕೆಲಸ	ಡಿಟೋ	2045	
ಗ್ರೇಡಿ ಕಲ್ಲುಗಳು	ನಂಬರು 1ಕ್ಕೆ	16	
ಬಿ. ಯಂ. ಕಲ್ಲುಗಳು	ಡಿಟೋ	2	
ಗೇಜು ಮತ್ತು ಸಾಲ್ ಕಲ್ಲು	ಡಿಟೋ	1	
ಕರೆಯ ನಂಬರು ಕಲ್ಲು	ಡಿಟೋ	1	
ಕೋಡಿಗಳು 200 ಅಡೀ ವುದ್ದ ..	ವಟ್ಟು	ವೊಬಲಗು	
ತೂಬುಗಳು—ಯರಡು	ಡಿಟೋ	ಡಿಟೋ	

IV. ಪ್ರತಿ ವಂದು ದರಖಾಸ್ತಿನ ಸಂಗಡಲೂ 50 ರೂಪಾಯಿಗಳ ಕರೆನ್ಸೀ ನೋಟುಗಳಾಗಲಿ, ಗವರ್ಮೆಂಟ್ ಪ್ರಾಂಸರಿ ಆಗಲಿ, ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನ ಅರನೆಸ್ಟ್‌ಮನಿಯಾಗಿ ಹಾಜರ್ಮಾಡಬೇಕು, ಮತ್ತು ಲಕೋಟೇಮೇಲೆ ಕೊಂಡಾಮರಿ ತಲಾವ್ ಕಾಂಗಾರೀ ವೈದ್ದಿಕ್ಯದ ಬಗ್ಗೆ ದರಖಾಸ್ತೆಂಬದಾಗಿ ಬರೆಯಬೇಕು, ತಪ್ಪಿದರೆ ಅಂಥಾ ದರಖಾಸ್ತುಗಳನ್ನ ತಿರಸ್ಕರಿಸಲಾಗೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೀಳಕಟ್ಟು ದರದದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ವಪ್ಪಿಕೊಳ್ಳಬೇಕೆಂಬ ನಿರ್ಬಂಧ ವಿರುವದಿಲ್ಲಾ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನ ನಮೂದಿಸತಕ್ಕದ್ದಿಲ್ಲ.

VI. ಯಾವ ದರಬಾಸ್ತನ್ನೇ ಆಗಲಿ ಮಂಜೂರ್ಮಾಡಿದ 8 ಯಂಟುದಿನಗಳ ವಳಗಾಗಿ ಆ ಮಂಜೂರ್ಮಾಡಲ್ಪಟ್ಟ ದರಬಾಸ್ತುದಾರನು ಕಂಟ್ರಾಕ್ಟ್ ಬಾಂಡಿಯಂಬ ಕರಾರು ಪತ್ರವನ್ನು ಬರದುಕೊಡಬೇಕು. ತಪ್ಪಿದಲ್ಲಿ ಅವನ ದರಬಾಸ್ತನ್ನಾ ಮಂಜೂರ್ಮಾಡಲ್ಪಟ್ಟು ಆ ಹಣವನ್ನ ಸರ್ಕಾರಕ್ಕೆ ಠೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಬಾಸ್ತುದಾರನ ಹೆಸರು ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರ ಆಫಿಸ್ ಮುಂಭಾಗದಲ್ಲಿ ನೋಟಿಸ್ ಬೋರ್ಡ್‌ಮೇಲೆ ಬರದು ಚಿಕಟಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಬಾಸ್ತುದಾರುಗಳ ವಿಷಯದಲ್ಲಿ ಜವಾಬ್ ದೊರಿಯುವದಿಲ್ಲ.

VIII. ಯಾವದಾದರೂ ದರಬಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಬಾಸ್ತುದಾರರ ಹಣವನ್ನ ಅವರಿಗೆ ವಾಪಸ್ ಮಾಡಲ್ಪಡುತ್ತೆ.

ಕೆ. ಪ್ರಹ್ಲಾದರಾವ್,
ಫಾರ್, ಎಗ್ಜಿಕ್ಯೂಟಿವ್ ಇಂಜನಿಯರ್.

ತಾರೀಖು 10ನೇ ಸೆಪ್ಟಂಬರ್ 1889.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರನೋಟಾದ ಸಬ್ ರೆಜಿಸ್ಟ್ರಾರ್ರ ಆಫಿಸಿನಲ್ಲಿ ಹಾಜರಾದ ತಂಸೂ ಕುಗಳು ದೇವಾರಸಾಗಿ 2 ವರುಷಗಳು ಮೇಲ್ಪಟ್ಟು ನಿಂತಿರುತ್ತೆ, ಅವುಗಳನ್ನ ಹಾಜರ್ಮಾಡಿದವರೇ ಆಗಲಿ ಅವುಗಳಲ್ಲಿ ಬಾಧ್ಯತೆ ಪುಟ್ಟುವರೇ ಆಗಲಿ ಈ ನೋಟಿಫಿಕೇರ್ಷ್ ತಾರೀಖು ಲಾಗಾಯಿತು ಒಂದು ತಿಂಗಳ ವಳಗಾಗಿ ಸಬ್ ರೆಜಿಸ್ಟ್ರಾರ್ರಲ್ಲಿ ಹಾಜರಾಗಿ ವಾಜವಿ ಫೀಜು ಪಾವತಿಮಾಡಿ ವಾಪಸ್ ಪಡೆಯುವಹುದು, ಇಲ್ಲವಾದರೆ ರೆಜಿಸ್ಟ್ರೇಷ್ಣ ಆಕ್ಟ್ 85ನೇ ಸೆಕ್ಷನ್ ಪ್ರಕಾರ ಅವುಗಳು ನಾಶ ಪಡಿಸಲ್ಪಡುವವು.

ಆಫಿಸ್ ಹೆಸರು.	ದಸ್ತೈವಜಿನ ನಂಬರ್.	ಕಕ್ಷಿಗಾರರು.		ರಿಜಿಸ್ಟರ್ ಬೈಸೋಹುದಾದ ತಾರೀಖು.	ರಿಜಿಸ್ಟರ್ ತಾರೀಖು.	ದಸ್ತಾವೇಜಿನ ಸ್ವಭಾವ.
		ದಸ್ತೈವಜು ಬರದುಕೊಟ್ಟವನ ಹೆಸರು.	ದಸ್ತೈವಜು ಬರಸಿಕೊಂಡವನ ಹೆಸರು.			
ಬವರಿಂಗ್‌ವೇಟೆ ಸಬ್ ರೆಜಿಸ್ಟ್ರಾರ್ ಆಫಿಸ್.	1886—1887 / 152	ಕನ್ನೂರಪ್ಪ ಕಟ್ಟ	ನೀರುಗಂಜಿ ಗಂಟ್ಲೋಡ್	30—1—87	31—1—87	ಮಾಕ್ಕುಪ್ಪ ಗ್ರಾಮದ ಬಳಿಯ ಖುಷ್ಕಿ 11ನೇ ನಂಬರ್ ಒಂಸ್ಕಿ ಕಂದಾಯ ರೂ. 5-3-4ಪೈ ನಂ. 12ನೇ ಖುಷ್ಕಿ ಒಂಪಸ್ಕಿ ಕಂದಾಯ ರೂಪಾಯಿ 5-3-2ಪೈ ಈ 2 ಜಮೀನೂ ನಿಮಿಗೆ ಕ್ರಯಮಾಡಿ ಕೊಟ್ಟು 100 ರೂಪಾಯಿ ತೆಗದುಕೊಂಡುಇಧೆನೆಂದು
	1887—1888 / ತಿರಸ್ಕರಿಸಲಾಗಿದೆ	ಹನುಮಂತರಾವ್	ರಾಮಯ್ಯ	13—6—87	27—6—87	ತಂಗಲುಕುಪ್ಪದ ಅವಮಾನೀ ಪೈಕಿ 928ನೇ ನಂಬರ್ ಜಮೀನ್ ಬೀಜವರಿ ||೨|| ಜಮೀನು ನಿಮಗೆ ಕುದ್ಧ ಕ್ರಯ ಮಾಡಿಕೊಟ್ಟು ನಿಮ್ಮಿಂದ 45 ರೂಪಾಯಿ ತಗದುಕೊಂಡು ಯಿಧೇನೆಂದು

ಅಬ್ದುಲ್‌ರಹಿಮ್ಖಾ,
ರೆಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 9ನೇ ಸೆಪ್ಟಂಬರ್ 1889.

ತುಮಕೂರು ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ದಾರ್ರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ಸ್ ೧೮೮೯ನೇ ಇಸವಿ ಮಾರ್ಚಿ ತಾರೀಖು 31ರ ವರಿಗಿನ ಬಡ್ಡೀ ಮೊಬಲಗು, ಪ್ಯಾಸ್ ಬುಕ್ಕುಗಳಲ್ಲಿ ದಾಖಲ್ಮಾಡಲು ಈ ಆಫಿಸಿಗೆ ಕಳುಹಿಸಬೇಕಾಗಿ ಇದರಿಂದ ತಿಳಿಯಪಡಿಸಿ ಯಿಧೆ.

ಹೆಚ್. ನಂಜುಂಡರಾಜೇ ಅರಸ್,
ಟ್ರೈಜರೀ ಆಫಿಸರ್.